**2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

| | |
|---|---|
| **Spl. C No.** | **671/2021** |

| | | |
|---|---|---|
| ಸಾಕ್ಷಿದಾರರ ಹೆಸರು | ಕುಬೇಂದ್ರನ್ | |
| ತಂದೆಯ ಹೆಸರು | ಕುಪ್ಪನ್ | ಸಾಕ್ಷಿಗೆ ದಿಃ19.12.2023 ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 47 ವರ್ಷ | |
| ಉದ್ಯೋಗ | ಚಾಲಕ | **PW -4** |
| ವಾಸ ಸ್ಥಳ | ದೊಡ್ಡನಾಗಮಂಗಲ, ಎಲೆಕ್ಟ್ರಾನಿಕ್ ಸಿಟಿ | **CW- 30** |

**ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ಚಂದನ್ ದಾಸ್ ಎನ್ನುವವರು ನಮ್ಮ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದರು. ಚಂದನ್ ದಾಸ್ ಇವರ ವಿವಾಹವಾಗಿತ್ತು. ಚಂದನ್ ದಾಸ್ ಈತನ ಮನೆಗೆ ಅಬ್ದುಲ್ ಖರೀಂ ಎನ್ನುವ ಹುಡುಗ ಬರುತ್ತಿದ್ದನು. ನ್ಯಾಯಾಲಯದ ವಿಸಿಯಲ್ಲಿ ಕಾಣುತ್ತಿರುವ 1 ನೇ ಆರೋಪಿತನನ್ನು ಸಾಕ್ಷಿ ನೋಡಿ ಗುರುತಿಸಿ ಅವರೇ ಅಬ್ದುಲ್ ಖರೀಂ ಅನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ವಿಸಿಯಲ್ಲಿ ಕಾಣುತ್ತಿರುವ ಇಬ್ಬರು ಆರೋಪಿತರು ಚಂದನ್ ದಾಸ್ ಇವರನ್ನು ಕೊಲೆ ಮಾಡಿರುತ್ತಾರೆ.

2. ಚಂದನ್ ದಾಸ್ ನ ಸ್ನೇಹಿತ ರವಿ ಈತನ ಕೊಲೆ ಕೂಡ ಆಗಿರುತ್ತದೆ. ನ್ಯಾಯಾಲಯದ ವಿಸಿಯಲ್ಲಿ ಕಾಣುತ್ತಿರುವ ಇಬ್ಬರು ಆರೋಪಿತರೇ ರವಿಕುಮಾರ್ ಈತನ ಕೊಲೆಯನ್ನೂ ಸಹ ಮಾಡಿರುತ್ತಾರೆ. 1 ನೇ ಆರೋಪಿ ಖರೀಂ ಈತನು ಚಂದನ್ ದಾಸ್ ಹೆಂಡತಿ ಊರಿಗೆ ಹೋದ ನಂತರ ಬಂದು ಚಂದನ್ ದಾಸ್ ಜೊತೆ

ನಾನು ಬಾಡಿಗೆಗೆ ನೀಡಿದ ಕೋಣೆಯಲ್ಲಿ ಇರುತ್ತಿದ್ದನು. 1 ನೇ ಆರೋಪಿ ಈತನು ಪೋಲಿಸರಿಗೆ ಚಂದನ್ ದಾಸ್ ಇದ್ದ ನಮ್ಮ ಮನೆಯನ್ನು ತೋರಿಸಿರುತ್ತಾನೆ. 1 ನೇ ಆರೋಪಿಯೊಂದಿಗೆ ಪೋಲಿಸರು ಚಂದನ್ ದಾಸ್ ಬಾಡಿಗೆಗೆ ಇದ್ದ ನಮ್ಮ ಮನೆಗೆ ಬಂದಿದ್ದರು.

3. 1 ನೇ ಆರೋಪಿಯು ಚಂದನ್ ದಾಸ್ ಬಾಡಿಗೆಗೆ ತೆಗೆದುಕೊಂಡ ಕೋಣೆಯಲ್ಲಿ ತಾನು ಬಚ್ಚಿಟ್ಟ ರಕ್ತದ ಕಲೆಯಾದ ಪ್ಯಾಂಟ್ ಮತ್ತು ಟೀ ಶರ್ಟ್ ಗಳನ್ನು ಹಾಗೂ ಚಾಕುವನ್ನು ಪೋಲಿಸರಿಗೆ ಹಾಜರುಪಡಿಸಿದನು. ಸಾಕ್ಷಿಯು 1 ನೇ ಆರೋಪಿಯ ಒಂದು ಪ್ಯಾಂಟ್ ಅನ್ನು ಮತ್ತು ಒಂದು ಟೀ ಶರ್ಟ್ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ-14 ಮತ್ತು 15 ಎಂದು ಗುರ್ತಿಸಲಾಯಿತು. ಸಾಕ್ಷಿ ಒಂದು ಚಾಕುವನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ-16 ಎಂದು ಗುರ್ತಿಸಲಾಯಿತು. ಮೇಲೆ ಹೇಳಿದ ಮೂರು ವಸ್ತುಗಳನ್ನು ಬಿಟ್ಟರೆ ಬೇರೆ ಯಾವುದೇ ವಸ್ತುಗಳನ್ನು ಪೋಲಿಸರು ವಶಪಡಿಸಿಕೊಂಡಿರುವುದಿಲ್ಲ. ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನೀಡಿರುವುದರಿಂದ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

4. ಪೋಲಿಸರು ಪ್ಯಾಂಟ್, ಶರ್ಟ್, ಚಾಕುವಿನ ಜೊತೆ ಒಂದು ಮೊಬೈಲ್ ಫೋನ್ ಗಳನ್ನು ವಶಕ್ಕೆ ಪಡೆದರು ಎಂದರೆ ಸರಿ ಇದೆ. ಸಾಕ್ಷಿ ನೋಕಿಯಾ ಮೊಬೈಲ್ ಅನ್ನು, ವಿವೋ ಮೊಬೈಲ್ ಫೋನ್ ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ-17 ಮತ್ತು 18 ಎಂದು ಗುರ್ತಿಸಲಾಯಿತು.

5. ಪೋಲಿಸರು ನಮ್ಮ ಮನೆಯ ಕೌಂಪೌಂಡ್ ಒಳಗಡೆ ಚಂದನ್ ದಾಸ್ ಗೆ ಸಂಬಂಧಪಟ್ಟ ದ್ವಿಚಕ್ರ ವಾಹನ ಸಂಖ್ಯೆ ಕೆಎ-03-ಇಎನ್-0800 ವನ್ನು ಜಪ್ತಿಪಡಿಸಿಕೊಂಡರು ಎಂದರೆ ಸರಿ ಇದೆ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ವಿಪಿ ವಕೀಲರಿಂದಃ**

(ನ್ಯಾಯಾಲಯದ ಸಮಯದ ಅಭಾವದಿಂದ ಪಾಟೀ ಸವಾಲನ್ನು ಮುಂದೂಡಲಾಯಿತು).

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.